ಸರ್ಕಾರವು ಮಾಡಿರುವುದಿಲ್ಲ ಅವರು ಉಚ್ಚ ನ್ಯಾಯಾಲಯದ ಆದೇಶದ ಪ್ರಕಾರ ನಮಗೇನು ಒಂದು ಆಹ್ವಾನವನ್ನು ಕೊಟ್ಟಿದ್ದರು ಆ ಬಗ್ಗೆ ಮಾಹಿತಿಯನ್ನು ತರಿಸಿಕೊಂಡು ಈ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆಂದು ಅವರಿಗೆ ಹೇಳಿದ್ದೇನೆ ಈಗಾಗಲೇ ಆದೇಶವಾಗಿರುವ ಬಗ್ಗೆಯೂ ಅವರಿಗೆ ತಿಳಿಸಿದ್ದೇನೆ. ಅಲ್ಲಿ ಶಾಲೆ ಇದ್ದರೆ 100% ಮುಚ್ಚುವಂತಹ ಪ್ರಶ್ನೆಯೇ ಬರುವುದಿಲ್ಲ ಆ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆಂದು ಖಾಸಗಿಯಾಗಿ ಹೇಳಿದ್ದೇನೆ.

ಅಧ್ಯಕ್ಷರು: O K

ಶ್ರೀ ಕೆ. ಶಿವಮೂರ್ತಿ: SC/ST ಶಾಲೆಗಳನ್ನು ಮುಚ್ಚುವುದಕ್ಕೆ ಸಂವಿಧಾನದಲ್ಲಿ ಅವಕಾಶವಿಲ್ಲ. Supreme Court of India ಇದನ್ನು ಎತ್ತಿ ಹಿಡಿದಿದೆ.

ಅಧ್ಯಕ್ಷರು: ಈ ಬಗ್ಗೆ ಅಲ್ಲಿಯೇ ಹೋಗಬೇಕಾಗುತ್ತದೆ ಮಾನ್ಯ ಸಚಿವರು ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದಾರೆ.

ಶ್ರೀ ಕೆ. ಶಿವಮೂರ್ತಿ: That is the defect of the Act, please incorporate the SC/ST protective and promotive provision ಇರುವುದನ್ನು ದಯವಿಟ್ಟು, Education Act ಕೆಳಗಡೆ ತಾವು incorporate ಮಾಡಬೇಕು, ಇಲ್ಲವೆಂದರೆ ನಾವ್ಯಾರು ಉಳಿಯುವುದಿಲ್ಲ.

ಅಧ್ಯಕ್ಷರು: ಆಯಿತು, O K ಶ್ರೀ ಸತೀಶ್ ರೆಡ್ಡಿಯವರೆ ತಾವು ಕೇಳಿ.

(5) ವಿಷಯ: ಮದ್ಯ ಮಾರಾಟ ಸನ್ನದ್ದು ಬಗ್ಗೆ

====

ಶ್ರೀ ಸತೀಶ್ ರೆಡ್ಡಿ: ಮಾನ್ಯ ಅಧ್ಯಕ್ಷರೆ, ನಾನು ಅಬಕಾರಿ ಸಚಿವರಿಗೆ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಬೆಂಗಳೂರಿನಲ್ಲಿ ಸುಮಾರು Bar & Restaurant ಗಳು ರಾತ್ರಿ ಮತ್ತು ಹಗಲು timings ಇಲ್ಲದೆ ಇದು ಕಳೆದ ಎರಡು